# ಪತ್ರಿಕಾ ಪ್ರಕಟಣೆ

**ನೆಲಮಂಗಲ ಉಪವಿಭಾಗ**

**ಮಾದನಾಯಕನಹಳ್ಳಿ ಪೊಲೀಸ್ ಠಾಣೆ**

## ಅಂತರ್ ರಾಜ್ಯ ಹೆದ್ದಾರಿ ದರೋಡೆ ಕೋರರ ಬಂಧನ

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಉಪವಿಭಾಗ, ಮಾದನಾಯಕನಹಳ್ಳಿ ಠಾಣೆಯ ಸರಹದ್ದು ಮಾದವಾರ ಗೇಟ್ ನಾಡ್ಗೀರ್ ಕಾಲೇಜ್ ಸಮೀಪದ ನೆಲಮಂಗಲ–ಬೆಂಗಳೂರು ಎನ್.ಹೆಚ್–48 ಸರ್ವೀಸ್ ರಸ್ತೆ ಜಂಕ್ಷನ್ ಬಳಿ ಒಂದು ಕೋಟಿ ರೂ ನಗದು ಹಣವನ್ನು ದರೋಡೆ ಮಾಡಿದ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.**

ದಿನಾಂಕ:11/03/2022 ರಂದು ಬೆಳಗ್ಗೆ 6.10 ಗಂಟೆ ಸಮಯದಲ್ಲಿ ನೆಲಮಂಗಲ ಉಪ–ವಿಭಾಗದ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿ ನಾಡ್ಗೀರ್ ಕಾಲೇಜ್ ಸಮೀಪದ ತುಮಕೂರು–ಬೆಂಗಳೂರು ಎನ್–48 ಸರ್ವೀಸ್ ರಸ್ತೆಯಲ್ಲಿ ಹುಬ್ಬಳ್ಳಿಯಿಂದ ತಮಿಳುನಾಡಿನ, ಕನ್ಯಾಕುಮಾರಿ ಜಿಲ್ಲೆ, ನಾಗರ ಕೊಯಿಲ್ ಎಂಬ ಊರಿಗೆ ಪಿರ್ಯಾದಿ ಫ್ರಾಂಕಲಿನ್ ಮತ್ತು ಇತರರು ಹೋಗುತ್ತಿದ್ದ ಕೆಎಲ್–26–ಜೆ–9934 ನಂಬರ್ ಮಾರುತಿ ಬ್ರಿಜಾ ಕಾರನ್ನು ಬಿಳಿ ಬಣ್ಣದ ಇನೋವಾ ಕಾರಿನಲ್ಲಿ ಅಡ್ಡಗಟ್ಟಿ ನಿಲ್ಲಿಸಿ ಈ ಕಾರಿನಲ್ಲಿ 6 ಕ್ಕೂ ಹೆಚ್ಚಿನ ಜನರು ಸ್ಟೀಲ್ ರಾಡ್ ಮತ್ತು ಇತರೆ ಆಯುಧಗಳಿಂದ ಕಾರಿನ ಗ್ಲಾಸ್ ಗಳನ್ನು ಹೊಡೆದು ಹಾಕಿ ಕಾರಿನಲ್ಲಿದ್ದ ಪಿರ್ಯಾದಿ ಮತ್ತು ಇತರೆ 4 ಜನರಿಗೆ ಹಲ್ಲೆ ನಡೆಸಿ ಮೇಲ್ಕಂಡ ಕಾರನ್ನು ಮತ್ತು ಕಾರಿನಲ್ಲಿದ್ದ 1 ಕೋಟಿ ರೂ ಹಣ, ಮೊಬೈಲ್ ಫೋನ್ ಗಳು ಹಾಗೂ ಇತರೆ ವಸ್ತುಗಳನ್ನು ದರೋಡೆ ಮಾಡಿಕೊಂಡು ಹೋದ ಬಗ್ಗೆ ಪಿರ್ಯಾದುದಾರರು ನೀಡಿದ ದೂರಿನ ಮೇರೆಗೆ ಠಾಣಾ ಮೊ.ಸಂ: 117/2021 ಕಲಂ 397 ಐಪಿಸಿ ರೀತ್ಯ ಪ್ರಕರಣ ದಾಖಲಿಸಿಕೊಂಡಿರುತ್ತದೆ.

ಈ ಪ್ರಕರಣದಲ್ಲಿ ಬೆಂಗಳೂರು ಪೊಲೀಸ್ ಅಧೀಕ್ಷಕರಾದ ಡಾ.ವಂಶೀಕೃಷ್ಣ ಐ.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಲಕ್ಷ್ಮೀ ಗಣೇಶ್, ಡಿವೈಎಸ್ ಪಿ ರವರಾದ ಗೌತಮ್.ಕೆ.ಸಿ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ.ಬಿ.ಎಸ್ ರವರ ನೇತೃತ್ವದಲ್ಲಿ 2 ವಿಶೇಷ ತಂಡಗಳನ್ನು ರಚನೆ ಮಾಡಿರುತ್ತೆ.

ಅದರಂತೆ ಕಾರ್ಯ ಪ್ರವೃತ್ತರಾದ ತಂಡವು ಕೃತ್ಯ ನಡೆದ ಸ್ಥಳದಿಂದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಕೃತ್ಯ ನಡೆದ ಬಳಿಕ ಆರೋಪಿತರು ಪಿರ್ಯಾದುದಾರರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ್ದ ಬಿಳಿ ಇನೋವಾ ಕಾರು ಸಮೇತ ಕುಣಿಗಲ್ ಮಾರ್ಗವಾಗಿ ಬೆಳ್ಳೂರು ಕ್ರಾಸ್ ಮುಖಾಂತರ ತೆರಳಿ ನಾಗಮಂಗಲಕ್ಕೆ ಹೋಗುವ ರಸ್ತೆಯಲ್ಲಿ ಪಿರ್ಯಾದುದಾರರ ಕಾರಿನಲ್ಲಿದ್ದ ಹಣ ತೆಗೆದುಕೊಂಡು ನಂತರ ಪಿರ್ಯಾದಿ ಕಾರನ್ನು ಬೆಂಗಳೂರು–ಹಾಸನ ಹೆದ್ದಾರಿಯಲ್ಲಿ ಬಿಟ್ಟು, ನಾಗಮಂಗಲ ಮುಖಾಂತರ ಗ್ರೇ ಬಣ್ಣದ ಇನೋವಾ ಕಾರಿನೊಂದಿಗೆ ಪಾಂಡುಪುರ, ಶ್ರೀರಂಗಪಟ್ಟಣ, ಮೈಸೂರು, ಚಾಮರಾಜನಗರ ವರೆಗೂ ಕೆಎ–03–ಎಂಹೆಚ್–3810 ನಂಬರಿನ ಬಿಳಿ ಇನೋವಾ ಕಾರಿನಲ್ಲಿ ಪ್ರಯಾಣಿಸಿ ನಂತರ ಕೆಎಲ್–40–1515 ನಂಬರ್ ಬದಲಿಸಿದ್ದ ಸದರಿ ವಾಹನವನ್ನು ವಿಶೇಷ ತನಖಾ ತಂಡಗಳು ಕೊಯಮತ್ತೂರು, ಪಾಲಕ್ಕಾಡ್, ತ್ರಿಸೂರ್, ಎರ್ನಾಕುಲಂವರೆಗೂ ಸುಮಾರು 250 ಕ್ಕೂ ಹೆಚ್ಚು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಬಳಿಕ ಕೇರಳ ಮೂಲದ ಆರೋಪಿತರೆಂದು

ಖಚಿತಪಡಿಸಿಕೊಂಡು 10 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತೆ.ಸದರಿ ಆರೋಪಿಗಳಿಂದ ದರೋಡೆಯಾಗಿದ್ದ, ಒಂದು ಮೊಬೈಲ್ ಫೋನ್, ಪರ್ಸ್, ಇತರೆ ವಸ್ತುಗಳನ್ನು ಮತ್ತು ದರೋಡೆಯಾಗಿದ್ದ ಹಣದಲ್ಲಿ 9,70,000/- ನಗದು ಹಣವನ್ನು ಹಾಗೂ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕೆಎಲ್-40-1515 ಬಿಳಿ ಬಣ್ಣದ ಇನೋವಾ ಕಾರು, ಕೆಎಲ್-41-ಎಸ್-4562 ಗ್ರೇ ಬಣ್ಣದ ಇನೋವಾ ಕಾರನ್ನು ಹಾಗೂ ಆಯುಧಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಸದರಿ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿಯಾದ ಶ್ರೀಧರ್ @ ಕೊಡಾಲಿ ಶ್ರೀಧರನ್ ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯವನಾಗಿದ್ದು, ಈತ ಚಿನ್ನದ ವ್ಯಾಪಾರಿಗಳಿಂದ ಹಣ ಸಾಗಾಣಿಕೆಯಾಗುವ ಬಗ್ಗೆ ಖಚಿತ ಮಾಹಿತಿ ಪಡೆದುಕೊಂಡು ಕೇರಳ ರಾಜ್ಯದಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿತರನ್ನು ಬಳಸಿಕೊಂಡು ಕರ್ನಾಟಕ, ಕೇರಳ, ತಮಿಳುನಾಡು ಮುಂತಾದ ಕಡೆ, ಹೆದ್ದಾರಿ ದರೋಡೆ ಮಾಡುವುದನ್ನು ರೂಡಿಸಿಕೊಂಡಿರುತ್ತಾನೆ. ಈತನ ವಿರುದ್ಧ ಕೇರಳ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ದರೋಡೆ ಪ್ರಕರಣಗಳು ದಾಖಲಾಗಿರುತ್ತವೆ.



ಸದರಿ ಕಾರ್ಯಾಚರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಶ್ರೀ.ಡಾ.ವಂಸೀಕೃಷ್ಣ. ಐ.ಪಿ.ಎಸ್. ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ.ಲಕ್ಷ್ಮೀಗಣೇಶ್.ಕೆ. ಕೆ.ಎಸ್.ಪಿ.ಎಸ್ ಹಾಗೂ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ.ಗೌತಮ್.ಕೆ.ಸಿ, ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ.ಬಿ.ಎಸ್.ಮಂಜುನಾಥ್, ಪಿಎಸ್‌ಐಗಳಾದ ಶ್ರೀ.ದಾಳೇಗೌಡ.ಡಿ, ಪ್ರೋ.ಪಿ.ಎಸ್.ಐ ಪ್ರದೀಪ್ ಕುಮಾರ್, ನೆಲಮಂಗಲ ಟೌನ್ ಪೊಲೀಸ್ ಠಾಣೆಯ ಪಿ.ಎಸ್.ಐ ಸುರೇಶ್, ದಾಬಸ್ ಪೇಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಮುರುಳಿ.ಎಂ.ಎನ್ ಮತ್ತು ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ಗಳಾದ ನಾರಾಯಣಸ್ವಾಮಿ, ಮಲ್ಲಗೊಂಡಿ, ರಾಜಶೇಖರ್, ಕೇಶವಾನಂದ, ರಘು.ಬಿ.ಎಸ್ ಪೊಲೀಸ್ ಕಾನ್ಸ್‌ಟೇಬಲ್‌ಗಳಾದ ಪರ್ವೀಜ್ ಪಾಷಾ, ಇಮ್ರಾನ್‌ಖಾನ್.ಎಸ್, ವೆಂಕಟೇಶ್.ಪಿ.ಕೆ, ಹಾಜಿಮಲಂಗ ಇನಾಮದಾರ್, ಲಕ್ಷ ಣ್ ನಾಯ್ಕ್, ಬಸವರಾಜ್, ನರೇಶ್. ರವಿಕುಮಾರ್ ಹಾಗೂ ತಾಂತ್ರಿಕ ವಿಭಾಗದ ಪೊಲೀಸ್ ಇನ್ಸಪೆಕ್ಟರ್ ಶಿವಶಂಕರ್ ಮತ್ತು ಸಿಬ್ಬಂಧಿಗಳಾದ ಉಮೇಶ್ ಹಾಗೂ ಆನಂದ ರವರನ್ನು ಒಳಗೊಂಡ ತಂಡ ಕೇರಳ ರಾಜ್ಯದ 10 ಜನ ಆರೋಪಿಗಳನ್ನು ಬಂದಿಸಿ, ದರೋಡೆಯಾಗಿದ್ದ ಕಾರು, ಒಂದು ಮೊಬೈಲ್ ಫೋನ್, ಪರ್ಸ್, ಇತರೆ ವಸ್ತುಗಳನ್ನು ಮತ್ತು ದರೋಡೆಯಾಗಿದ್ದ ಹಣದಲ್ಲಿ 9,70,000/- ನಗದು ಹಣವನ್ನು ಹಾಗೂ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕೆಎಲ್-40-1515 ಬಿಳಿ ಬಣ್ಣದ ಇನೋವಾ ಕಾರು, ಕೆಎಲ್-41-ಎಸ್-4562 ಗ್ರೇ ಬಣ್ಣದ ಇನೋವಾ ಕಾರನ್ನು ಹಾಗೂ ಆಯುಧಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಸದರಿ ಕಾರ್ಯಾಚರಣೆಯನ್ನು ಮಾನ್ಯ ಹಿರಿಯ ಪೊಲೀಸ್ ಅಧಿಕಾರಿಗಳು ಶ್ಲಾಘಿಸಿರುತ್ತಾರೆ.

(ಶ್ರೀ.ಎಂ.ಚಂದ್ರಶೇಖರ್ ಐಪಿಎಸ್)
ಪೊಲೀಸ್ ಮಹಾನಿರೀಕ್ಷಕರು
ಕೇಂದ್ರ ವಲಯ, ಬೆಂಗಳೂರು